

# ಪುರುಷರ ಕಾಲರ್ ಟ್ರೆಂಡ್

ಪುರುಷರ ಶರ್ಟ್ ಆಯ್ಕೆ ಮಾಡುವಾಗ ಸ್ಟೈಲಿಷ್ ಲುಕ್ ನೀಡುವ ಕಾಲರ್ ನೆಕ್‌ಗಳ ಆಯ್ಕೆಯೂ ಮುಖ್ಯ. ವಿ ನೆಕ್, ಬೋಟ್ ನೆಕ್, ಟರ್ಟಲ್ ನೆಕ್ ಮುಂತಾದ ನೆಕ್‌ಗಳು ಟ್ರೆಂಡಿಯಾಗಿಯೂ ಇರುತ್ತವೆ.

■ ಪವಿತ್ರಾ ರಾಘವೇಂದ್ರ ಶೆಟ್ಟಿ

ವಿ ನೆಕ್, ರೌಂಡ್ ನೆಕ್, ಬೋಟ್ ನೆಕ್... ಹೀಗೆ ಮಹಿಳೆಯರಿಗೆ ಬ್ಲೌಸ್ ಅಥವಾ ಡ್ರೆಸ್‌ಗಳ ನೆಕ್ ಡಿಸೈನ್‌ನಲ್ಲಿ ಹಲವು ಬಗೆಗಳಿವೆ. ಆದರೆ ಪುರುಷರ ವಸ್ತ್ರದ ವಿಷಯಕ್ಕೆ ಬಂದರೆ ಇಷ್ಟೆಲ್ಲಾ ಆಯ್ಕೆಗಳು ಸಿಗುತ್ತವೆಯೇ? ಬಹುಪಾಲು ಪುರುಷರು ಕಾಲರ್ ಇರುವ ಶರ್ಟ್ ಅಥವಾ ಬೋಳು ಕುತ್ತಿಗೆಯ ಟೀ ಶರ್ಟ್ ಧರಿಸಿ ಸುಮ್ಮನಾಗುತ್ತಾರೆ. ಹಾಗೆಂದು ಅವರಿಗಿರುವ ಆಯ್ಕೆ ಕಡಿಮೆ ಎಂದೇನೂ ತಿಳಿಯಬೇಕಿಲ್ಲ.

ಪುರುಷರು ಧರಿಸುವ ಅಂಗಿಗಳು ಈ ಸ್ಟೈಲ್‌ನ ಪರಿಧಿಯಿಂದ ಹೊರಗಿವೆಯಾ ಎಂದು ಹುಡುಕಿದರೆ ಸಾಕಷ್ಟು ವಿಭಿನ್ನ ಬಗೆಯ ಕಾಲರ್ (ಕತ್ತು ಪಟ್ಟಿ) ಡಿಸೈನ್‌ಗಳು ಕಣ್ಣಿಗೆ ಬಿದ್ದವು. ಶರ್ಟ್‌ನ ಒಂದು ಅವಿಭಾಜ್ಯ ಅಂಗದಂತೆ ಇರುವ ಈ ಕಾಲರ್ ಹುಡುಗರ ಸ್ಟೈಲ್‌ನ ಪ್ರತೀಕ ಕೂಡ ಹೌದು. ಹಿಂದೆಲ್ಲಾ ಕಾಲರ್ ಸರಿಯಾಗಿ ಮಡಚಿಕೊಳ್ಳದೇ ಏರಿಸಿಕೊಂಡು ಹೋದರೆ ಇವನು ಪುಂಡಾಟಿಕೆ ಮಾಡುವವನು ಎಂಬ ಬಿರುದು ನೀಡುತ್ತಿದ್ದರು.

ಗಂಡಸರು ಜಗಳವಾಡಿಕೊಂಡರೆ ಮೊದಲು ಹಿಡಿಯುವುದೇ ಅಂಗಿಯ ಕಾಲರ್ ಪಟ್ಟಿಯನ್ನು. ಆದರೆ ಈಗ ಕಾಲರ್ ಕೂಡ ಒಂದು ಫ್ಯಾಷನ್ ಆಗಿದೆ. ನೋಡುವುದಕ್ಕೆ ಸರಳವಾಗಿ ಕಂಡರೂ ಈ ಕಾಲರ್‌ನಲ್ಲಿ ನಾನಾ ವಿನ್ಯಾಸಗಳಿವೆ. ಇದು ಕೂಡ ನಿಮ್ಮ ಸ್ಟೈಲ್ ಭಿನ್ನವಾಗಿ ಕಾಣಿಸುವುದರಲ್ಲಿ ಸಹಾಯ ಮಾಡುತ್ತವೆ.

ಟಾಪ್ ಕಾಲರ್, ಮ್ಯಾಂಡಿರಿಯನ್ ಕಾಲರ್, ಫ್ಲ್ಯಾಟ್ ಕಾಲರ್ ಹೀಗೆ... ನಾನಾ ವಿನ್ಯಾಸದ ಕಾಲರ್‌ಗಳು ಇವೆ. ಯಾವ ಕಾರ್ಯಕ್ರಮಕ್ಕೆ ಯಾವ ಬಗೆಯ ಕಾಲರ್ ಇರುವ ಉಡುಪು ಧರಿಸಿದರೆ ಸೂಕ್ತ.

ಸಾಮಾನ್ಯವಾಗಿ ಶರ್ಟ್ ಧರಿಸಿ ಬಂದಿರುವವರನ್ನು ನೋಡಿದಾಗ ಅವರ ಲುಕ್

